**ದಿನಾಂಕಃ 27/11/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಎಂ.ಸಿ.ಹೆಚ್ ವಕೀಲರಿಂದಃ**

1. ನಾನು 5 ನೇ ತರಗತಿಯವರೆಗೆ ಶಾನುಬೋಗನಹಳ್ಳಿಯಲ್ಲಿ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಶಾನುಬೋಗನಹಳ್ಳಿಯಲ್ಲೇ ಹುಟ್ಟಿ ಬೆಳೆದಿದ್ದು. ನನ್ನ ತಾತನ ಕಾಲದಿಂದಲೂ ನಾವು ಶಾನುಬೋಗನಹಳ್ಳಿಯಲ್ಲಿ ವಾಸಿಸುತ್ತಿದ್ದೇವೆ. ನನ್ನ ತಂದೆಯ ಅನಾರೋಗ್ಯದ ಬಗ್ಗೆ ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ನ್ಯಾಯಾಲಯಕ್ಕೆ ಬಂದರೆ ಸತ್ಯಾಂಶ ಗೊತ್ತಾಗುತ್ತದೆ ಎಂದು ನಾನು ಸುಳ್ಳು ವಿಶೇಷ ಅಧಿಕಾರ ಪತ್ರ ಪಡೆದಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ನಮ್ಮ ಜಾಗ ಬೇಕು ಎಂದು ಈ ದಾವೆಯನ್ನು ಹೂಡಿದ್ದಾರೆ. ದಾವಾಸ್ವತ್ತಿನ ಸಂಃ229. ದಾವಾಸ್ವತ್ತು ನನ್ನ ತಂದೆಯ ತಂದೆಯದು. ಎರಡು ಸ್ವತ್ತುಗಳಿಗೆ ಸಂಬಂಧಿಸಿದಂತೆ ಈ ದಾವೆಯನ್ನು ಹೂಡಿದ್ದೇವೆ. 2 ಸ್ವತ್ತುಗಳ ಚಕ್ಕುಬಂದಿ ಗೊತ್ತು. ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಹನುಮಯ್ಯ ನವರ ಮನೆ, ಉತ್ತರಕ್ಕೆ ಕಾಳಯ್ಯ ನವರ ಮನೆ, ದಕ್ಷಿಣಕ್ಕೆ ಶಿವರಾಮಯ್ಯ ಮತ್ತು ಮಮತಾ ರವರ ಮನೆ. ಇನ್ನೊಂದು ಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ ನಮ್ಮ ಜಾಗ, ಪಶ್ಚಿಮಕ್ಕೆ ಹನುಮಯ್ಯನವರ ಮನೆ, ಉತ್ತರಕ್ಕೆ ಕಾಳಯ್ಯ ರವರ ಮನೆ, ದಕ್ಷಿಣಕ್ಕೆ ಶಿವರಾಮಯ್ಯ ನವರ ಮನೆ. ಹನುಮಯ್ಯ, ಕಾಳಯ್ಯ ಮತ್ತು ಶಿವರಾಮಯ್ಯ ನವರ ಮನೆಯ ಡಿಮಾಂಡ್ ಮತ್ತು ಅಸೆಸ್ಮೆಂಟ್ ಸಂಖ್ಯೆ ಗೊತ್ತಿಲ್ಲ.

2. ನಿಪಿ.2 ರಿಂದ 4 ರಲ್ಲಿ ಸೂಳೇಕೊಟೆ ಗ್ರಾಮದ್ದು ಎಂದು ನಮೂದಿಸಿಲ್ಲದ ಕಾರಣ ಸದರಿ ಸ್ವತ್ತು ಸೂಳೇಕೋಟೆ ಗ್ರಾಮದ್ದಲ್ಲ ಎಂದರೆ ಸರಿಯಲ್ಲ. ಕಂದಾಯ ರಸೀದಿಗಳನ್ನು ಹಾಜರುಪಡಿಸಿದ್ದೇನೆ. ಕಂದಾಯ ರಸೀದಿಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ.5 ರಿಂದ 10 ರಲ್ಲಿರುವ ಪೋಟೋಗಳು 1 ನೇ ಪ್ರತಿವಾದಿಯ ಜಂಜರ್ ನಂ.268 ರ ಸ್ವತ್ತಿಗೆ ಸಂಬಂಧಿಸಿದ್ದು ಎಂದರೆ ಸರಿಯಲ್ಲ. ನನ್ನ ತಂದೆಗಾಗಲೀ ಅಥವಾ ನನ್ನ ತಾತನಿಗಾಗಲೀ ಸೂಳೇಕೋಟೆ ಗ್ರಾಮದಲ್ಲಿ ಯಾವುದೇ ಸ್ವತ್ತುಗಳು ಇಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತುಗಳ ಇ–ಸ್ವತ್ತು ಮಾಡಿಸಿಲ್ಲ.

3. ಶಿಲ್ಪಾ ರವರ ಹೆಸರಿಗೆ ಸರ್ಕಾರದಿಂದ ಮನೆ ಮಂಜೂರಾತಿ ಆದೇಶವಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ದೊಡ್ಡಕಮರವಳ್ಳಿ ಗ್ರಾಮ ಪಂಚಾಯತಿಯವರು ಸ್ಥಳಕ್ಕೆ ಬಂದು ಅವರು ಮನೆ ಕಟ್ಟಿಕೊಳ್ಳಲು ಆದೇಶ ಪತ್ರ ನೀಡಿದ್ದಾರೆ ಎಂದರೆ ಸರಿಯಲ್ಲ. 2016 ರಿಂದಲೂ ಪ್ರತಿವಾದಿಗಳು

ಮನೆಯನ್ನು ಕಟ್ಟಿಕೊಂಡು ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾಸ್ವತ್ತಿಗೆ ಸಂಬಂಧಿಸಿದಂತೆ ಪ್ರತಿವಾದಿಗಳು ಒತ್ತುವರಿ ಮಾಡಿಕೊಂಡಿದ್ದಾರೆಂದು ತೋರಿಸಲು ಯಾವುದೇ ದಾಖಲಾತಿ ಇಲ್ಲ ಎಂದರೆ ಸರಿಯಲ್ಲ. ಗ್ರಾಮ ಪಂಚಾಯತಿಯವರಿಗೆ ಒತ್ತುವರಿ ಬಗ್ಗೆ ಅರ್ಜಿ ಸಲ್ಲಿಸಿದ್ದೇವೆ, ಅದರೆ ಸರ್ವೇಯರ್ ಸ್ಥಳಕ್ಕೆ ಬಂದಿಲ್ಲ. 2017 ರಲ್ಲಿ ಅಳತೆ ಮಾಡಲು ಅರ್ಜಿ ಸಲ್ಲಿಸಿದ್ದೆವು. ಅವರು ಸ್ಥಳಕ್ಕೆ ಬಂದು ಅಳತೆ ಮಾಡಿ ವರದಿ ನೀಡಿಲ್ಲ. ನಾನು ಪುನಃ ಕೇಳಿದಾಗ ಸ್ವಲ್ಪ ಕಾಲಾವಕಾಶ ಕೊಡಿ ಎಂದು ತಿಳಿಸಿದ್ದರು. ಗ್ರಾಮದಲ್ಲಿ ಈ ಬಗ್ಗೆ ಪಂಚಾಯತಿ ಮಾಡಿದ್ದು ನನಗೆ ಗೊತ್ತಿಲ್ಲ. ನಾನು ದಾವೆಯಲ್ಲಿ ಹೇಳಿರುವಂತೆ ಪ್ರತಿವಾದಿಗಳು ದಾವಾ 'ಬಿ' ಸ್ವತ್ತಿನಲ್ಲಿ ಯಾವುದೇ ಒತ್ತುವರಿ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ನಿಪಿ.2 ರಿಂದ 4 ದಾಖಲೆಗಳಿಗೂ ಪ್ರತಿವಾದಿಗಳಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತುಗಳನ್ನು ಕಬಳಿಸಲು ಸುಳ್ಳು ಚಕ್ಕುಬಂದಿಯನ್ನು ನೀಡಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ಕೊಟ್ಟು ಅನ್ಯತಾ ಪಾಯಿದೆ ಹೊಂದಲು ಸುಳ್ಳು ದಾವೆಯನ್ನು ನನ್ನ ತಂದೆ ಹೂಡಿದ್ದಾರೆ ಎಂದರೆ ಸರಿಯಲ್ಲ. ನಿಪಿ.2 ರಿಂದ 4 ದಾಖಲಾತಿಗಳಿಗೂ ನಿಪಿ.5 ರಿಂದ 10 ರಲ್ಲಿ ಕಾಣಿಸಿರುವ ಸ್ವತ್ತುಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಪಿ.5 ರಿಂದ 10 ಪೋಟೋಗಳಲ್ಲಿ ತೋರಿಸಿರುವ ತಮ್ಮ ಸ್ವತ್ತಿನಲ್ಲಿ ಪ್ರತಿವಾದಿಗಳು ತಮ್ಮ ಮನೆಗಳನ್ನು ಕಟ್ಟಿಕೊಂಡಿದ್ದಾರೆ ಎಂದರೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**